**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560 001**

ಸಂಖ್ಯೆ: ನೃತ್ಯ/ನಾಟಕ/ತರಬೇತಿ ಕಾರ್ಯಾಗಾರ 2014-15 ದಿನಾಂಕ: 01.09.2014.

**ಜ್ಞಾಪನ**

ವಿಷಯ: ರಾಜ್ಯ ಮಟ್ಟದ ನಾಟಕ, ನೃತ್ಯ ಶಿಕ್ಷಕರ ಶೈಕ್ಷಣಿಕ ಕಾರ್ಯಾಗಾರಕ್ಕೆ ಶಿಕ್ಷಕರ ನಿಯೋಜನೆ ಬಗ್ಗೆ.

ಉಲ್ಲೇಖ: ಅಧ್ಯಕ್ಷರು, ಕರ್ನಾಟಕ ರಾಜ್ಯ ನಾಟಕ ಮತ್ತು ನೃತ್ಯ ಶಿಕ್ಷಕರ ಸಂಘ(ರಿ) ನಂ. 24, 19ನೇ ಅಡ್ಡರಸ್ತೆ, 1ನೇ ಮುಖ್ಯ ರಸ್ತೆ, ಜಯನಗರ, ಮೈಸೂರು-14 ರವರ ಪತ್ರ ದಿನಾಂಕ: 26.08.2014.

--------.

ಮೇಲ್ಕಂಡ ವಿಷಯಕ್ಕೆ ಉಲ್ಲೇಖದ ಪತ್ರದಂತೆ ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರೌಢ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 45 ಜನ ನಾಟಕ ಶಿಕ್ಷಕರು ಹಾಗೂ 10 ಮಂದಿ ನೃತ್ಯ ಶಿಕ್ಷಕರಿಗೆ ಶೈಕ್ಷಣಿಕ ರಂಗ ಭೂಮಿಯಲ್ಲಿನ ಶಿಕ್ಷಣ ಸಮನ್ವಯತೆ ಕುರಿತಾದ ಕಾರ್ಯಾಗಾರವನ್ನು ಮೈಸೂರಿನ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ (ಡಯಟ್) ನಲ್ಲಿ ದಿನಾಂಕ: 13.09.2014 ಹಾಗೂ 14.09.2014 ರಂದು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವ ಎಲ್ಲಾ ನಾಟಕ ನೃತ್ಯ ಶಿಕ್ಷಕರಿಗೆ ಅವರ ಶಾಲಾ ಕೆಲಸದ ದಿನಗಳಿಗೆ ದಿನಾಂಕ: 12.09.2014 ರಿಂದ 14.09.2014 ರವರೆಗೆ ಅನ್ಯ ಕಾರ್ಯ (ಒ.ಒ.ಡಿ) ಎಂದು ಪರಿಗಣಿಸಿದೆ. ಸಂಬಂಧಪಟ್ಟ ಶಾಲಾ ಮುಖ್ಯಸ್ಥರು ಅವರನ್ನು ಸಕಾಲದಲ್ಲಿ ಕಾರ್ಯಾಗಾರಕ್ಕೆ ಭಾಗವಹಿಸಲು ಬಿಡುಗಡೆ ಮಾಡಿ ಕ್ರಮ ವಹಿಸುವುದು.

ನಿರ್ದೇಶಕರು ( ಪ್ರೌಢ ಶಿಕ್ಷಣ)

ಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ,
2. ಸಂಬಂಧಪಟ್ಟ ಶಾಲಾ ಮುಖ್ಯಸ್ಥರಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ.

SKR\\Typing3server\e\E\Music\1186-14.doc